
# ಶ್ರೀಮಾತೆ ಮತ್ತು ಅವರ 'ಖೂಕಿ'



ಸ್ವಾಮಿ ಪೂರ್ಣಾತ್ಮಾನಂದ

ನಿವೇದಿತೆ ಶ್ರೀಮಾತೆಯವರ ಸುಪುತ್ರಿ ದೂರದ ದೇಶದಿಂದ ಬಂದ ಈ ಕನ್ಯಾಮಣಿಯನ್ನು ತನ್ನ ಮಡಿಲಿಗೆ ಶ್ರೀಮಾತೆ ಬರಮಾಡಿಕೊಂಡ ಸುಮಧುರ ಚಿತ್ರಣವನ್ನು ನೀಡಿರುವ ಸ್ವಾಮೀಜಿಯವರು ತ್ರಿಪುರಾದ ಅಗರ್ತಲಾದಲ್ಲಿರುವ ರಾಮಕೃಷ್ಣ ಮಿಷನ್ ಕೇಂದ್ರದ ಮುಖ್ಯಸ್ಥರು.

ಅನುವಾದ:
*ಡಾ. ಪಾಂಡುರಂಗ ವಿಠಲ*

೧೮೯೮, ಜನವರಿ ೨೮ ರಂದು ಲಂಡನ್ನಿನಿಂದ ಸಾವಿರಾರು ಮೈಲಿ ದೂರ ಪ್ರಯಾಣ ಮಾಡಿ ತನ್ನ ಗುರು ಸ್ವಾಮಿ ವಿವೇಕಾನಂದರ ಅಡಿಗಳಲ್ಲಿ ಸೇವೆ ಸಲ್ಲಿಸಲು ಕೊಲ್ಕತಾಕ್ಕೆ ಬಂದು ಸೇರಿದಳು, ಮೂವತ್ತರ ಹರೆಯದ ಮಾರ್ಗರೆಟ್ ಎಲಿಜಬೆತ್ ನೊಬೆಲ್. ಲಂಡನ್ ಮತ್ತು ಕೊಲ್ಕತಾಗಳ ನಡುವೆ ಭೌತಿಕ ಸ್ವರೂಪದ ಸಾಗರದ ಅಂತರ ಮಾತ್ರವೇ ಇರಲಿಲ್ಲ; ಶ್ರದ್ಧೆ ಮತ್ತು ಸಂಸ್ಕೃತಿಗಳ ಅಂತರವೂ ಇತ್ತು. ಹಾಗೆಯೇ ಎರಡೂ ದೇಶಗಳ ನಡುವೆ ಇದ್ದ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಸ್ಥಿತಿಗಳ ಅಂತರವನ್ನೂ ಇವಳು ದಾಟಬೇಕಾಗಿತ್ತು. ಈ ವ್ಯತ್ಯಾಸಗಳು ತಮ್ಮ ಹಲವಾರು ಮುಖಗಳಲ್ಲಿ, ಅಭೇದ್ಯವಾಗಿದ್ದವು. ಈ ಕಟು ವಾಸ್ತವಗಳ ಪೂರ್ಣ ಅರಿವಿದ್ದೇ, ಮುಂದೆ 'ಸೋದರಿ ನಿವೇದಿತಾ' ಎಂದು ಹೆಸರಾದ ಮಾರ್ಗರೆಟ್ ಕೊಲ್ಕತಾಕ್ಕೆ ಬಂದು ಸೇರಿದಳು.

ಕೊಲ್ಕತಾದ ಹತ್ತಿರದ ಬೇಲೂರಿನಲ್ಲಿ ಆಗತಾನೇ ಕೊಂಡುಕೊಂಡಿದ್ದ ಹಳೆಯ ಮನೆಗೆ ಸಣ್ಣಪುಟ್ಟ ರಿಪೇರಿ ಮಾಡಿಸಿ, ಮಾರ್ಗರೆಟ್ ಮತ್ತಿತರರ ವಸತಿಗೆ ಏರ್ಪಾಡು ಮಾಡಲಾಗಿತ್ತು. ಸ್ವಾಮಿ ವಿವೇಕಾನಂದರು ಈಗ ಅವಳನ್ನು ಕೊಲ್ಕತಾದ ಬಾಗ್‌ಬಜಾರಿನ ೧೦/೨, ಬೋಸ್‌ಪಾರಾ ಲೇನ್‌ನಲ್ಲಿ, ಬಾಡಿಗೆ ಮನೆಯಲ್ಲಿದ್ದ ಶ್ರೀಮಾತೆ ಶಾರದಾದೇವಿಯವರ ಪಾದಾರವಿಂದಗಳೆಡೆಗೆ ಕರೆದೊಯ್ದಿದ್ದಾರೆ. ಅಂದು ಸಂತ ಪ್ಯಾಟ್ರಿಕ್‌ನ ದಿನ, ೧೮೯೮, ಮಾರ್ಚ್ ೧೭. ನಾಲ್ಕೂ ಕಣ್ಣುಗಳು ಒಂದಾದವು. ತಮ್ಮ ಚರಣಗಳಿಗೆ ನಮಸ್ಕರಿಸಿದ ಮಾರ್ಗರೆಟ್‌ಳನ್ನು ಶ್ರೀಮಾತೆ ಅಪ್ಪಿಕೊಂಡರು. ಬಹಳ ಕಾಲದ ನಂತರ ತವರಿಗೆ ಬಂದ ಮಗಳನ್ನು ತಾಯಿಯೊಬ್ಬಳು ಸ್ವಾಗತಿಸಿ ಪ್ರೀತಿ ತೋರುವಂತೆ ಆಕೆಯನ್ನು ಕಂಡರು. ಅವರ ಪವಿತ್ರ ಹಸ್ತಗಳು ನಿವೇದಿತೆಯ ತಲೆಯನ್ನು ಸ್ಪರ್ಶಿಸಿದವು, ಅವರ ಪ್ರೀತಿಯ ಚುಂಬನದಿಂದ ಆಕೆ ರೋಮಾಂಚನಗೊಂಡಳು. ಒಂದು ಬಗೆಯ ಪರಮಶಾಂತಿ ಹಾಗೂ ಆನಂದದ ಭಾವ ಅವಳನ್ನು ತುಂಬಿತು; ಹೃದಯ ಉಕ್ಕಿತು. ಅವಳ ಜತೆ ಬಂದಿದ್ದ ಶ್ರೀಮತಿ ಸಾರಾ ಬುಲ್ ಮತ್ತು ಕುಮಾರಿ ಜೊಸೆಫಿನ್ ಮ್ಯಾಕ್ಲಿಯಾಡ್ ಎಂಬ ವಿದೇಶಿ ಮಹಿಳೆಯರನ್ನು ಕೂಡ, 'ಇವರೂ ನನ್ನ ಮಕ್ಕಳೇ' ಎಂಬ ಪ್ರೀತಿಯ ಭಾವನೆಯಿಂದ ಶ್ರೀಮಾತೆ ಸ್ವಾಗತಿಸಿದರು. ಪ್ರತಿ ಸಲ ಹೋದಾಗಲೂ ಅವರೆಲ್ಲರಿಗೂ ಹಸ್ತಲಾಘವ ಕೊಡುತ್ತಿದ್ದರು. ಕಂಡವರು ಆಶ್ಚರ್ಯಪಡುವಂತೆ ಈ ವಿದೇಶಿ ಹೆಣ್ಣುಮಕ್ಕಳ ಜೊತೆಗೂಡಿ ಉಣ್ಣುತ್ತಿದ್ದರು. ಚಿಕ್ಕ ಮಕ್ಕಳಿಗೆ ತಿನ್ನಿಸುವಂತೆ ಅವರ ಬಾಯಿಗೆ ಸಿಹಿತಿಂಡಿ ಇಟ್ಟು,



ತಾವೇ ಸ್ವತಃ ನೀರು ಕುಡಿಸುತ್ತಿದ್ದರು. ಆ ವಿದೇಶಿ ಮಹಿಳೆಯರು ಕೂಡ ಹಾಗೆಯೆ ಪ್ರತಿಸ್ಪಂದಿಸುತ್ತಿದ್ದರು. ಅಂದಿನ ದಿನಗಳಲ್ಲಿ ಪರಧರ್ಮಕ್ಕೆ ಸೇರಿದ ವಿದೇಶೀಯರ ಜೊತೆ ಈ ರೀತಿ ವರ್ತಿಸುವುದಿರಲಿ, ಅದನ್ನು ಕುರಿತು ಯೋಚಿಸುವುದೂ ಜಾತಿಗೆಟ್ಟ ನಡವಳಿಕೆಯೆಂದು ಬಗೆಯಲಾಗಿತ್ತು. ಶ್ರೀಮಾತೆ ವಿದೇಶೀಯರೊಂದಿಗೆ ಆಹಾರ ಸ್ವೀಕರಿಸಿದ್ದರ ಹಿಂದೆ ಗಾಢವಾದ ಅರ್ಥವಿದೆ. ಇದರಿಂದ ಹಿಂದೂಸಮಾಜ ಕೂಡ ಆ ಹೆಣ್ಣು ಮಕ್ಕಳನ್ನು ಬರಮಾಡಿಕೊಳ್ಳಲು ಅಧಿಕೃತ ಅನುಮತಿ ದೊರೆತಂತಾಯಿತು. ಸ್ವತಃ ಸ್ವಾಮಿ ವಿವೇಕಾನಂದರೇ ಇದನ್ನು ಕುರಿತು ಆಲೋಚಿಸುವ ಧೈರ್ಯವನ್ನೂ ಮಾಡಿರಲಿಲ್ಲ. ಆ ಕಟ್ಟಡದ ಕೆಳಗೆ ಇದ್ದ ಅವರು, ಮೇಲಿನ ಮಹಡಿಯಲ್ಲಿ ನಡೆದ ಈ ಪ್ರಸಂಗವನ್ನು ಕೇಳಿತಿಳಿದು ಭಾವೋದ್ವೇಗಭರಿತರಾದರು. ಸ್ವಾಮಿ ರಾಮಕೃಷ್ಣಾನಂದರಿಗೆ ಬರೆದ ಪತ್ರದಲ್ಲಿ (ಮಾರ್ಚ ೧೮೯೮) ಸಂತಸದಿಂದ ಹೀಗೆ ಉದ್ಗರಿಸಿದರು: "ಶ್ರೀಮಾತೆಯವರು ಇಲ್ಲಿದ್ದಾರೆ. ಅವರನ್ನು ನೋಡಲು ಸ್ವಲ್ಪ ದಿನಗಳ ಕೆಳಗೆ ವಿದೇಶಿ ಮಹಿಳೆಯರು ಹೋಗಿದ್ದರು. ಶ್ರೀಮಾತೆ ಅವರ ಜೊತೆಗೆ ಊಟ ಮಾಡಿದರಂತೆ! ಇದೊಂದು ಅದ್ಭುತ ಅಲ್ಲವೇ?!"

ಆ ದಿನವನ್ನು ಎಲ್ಲಕ್ಕಿಂತ ಮಹತ್ವದ ದಿನ ಎಂದು ತನ್ನ ದಿನಚರಿಯಲ್ಲಿ ಬರೆದುಕೊಂಡಳು ಮಾರ್ಗರೆಟ್. ಆಕೆಗೆ ಅದು ತನ್ನ ಜೀವನದ ಅತ್ಯುತ್ತಮ ದಿನವಾಗಿತ್ತು. ಶ್ರೀಮಾತೆಯವರಿಂದ ಬೀಳ್ಕೊಂಡ ಗೆಳತಿಯರು ಸ್ವಾಮೀಜಿಯವರೊಡನೆ ದೋಣಿಯನ್ನೇರಿ, ಗಂಗಾನದಿಯನ್ನು ದಾಟಿ, ಬೇಲೂರು ಮಠವನ್ನು ತಲುಪಿದರು. ಆ ದೋಣಿಯಾನದ ಸಮಯದಲ್ಲಿ ಮಾರ್ಗರೆಟ್‌ಳಿಗೆ ಬ್ರಹ್ಮಚರ್ಯ ದೀಕ್ಷೆ ನೀಡುವ ತಮ್ಮ ಇಚ್ಛೆಯನ್ನು ಸ್ವಾಮೀಜಿ ವ್ಯಕ್ತಪಡಿಸಿದರು. ಈ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳುವ ಮುನ್ನ, ನಿವೇದಿತೆಯ ಬಗ್ಗೆ ಶ್ರೀಮಾತೆಯವರ ಪ್ರತಿಕ್ರಿಯೆ ಹೇಗಿದ್ದೀತು ಎಂದು ಕಾದು ನೋಡಲು ಸ್ವಾಮೀಜಿ ಬಹುಶಃ ಬಯಸಿದ್ದಿರಬೇಕು. ಶ್ರೀಮಾತೆ ಆಕೆಯನ್ನು ಪ್ರೀತಿಯಿಂದ ತಮ್ಮವಳನ್ನಾಗಿಸಿಕೊಂಡರು. ಅನಂತರವಷ್ಟೇ ಸ್ವಾಮೀಜಿ ಬ್ರಹ್ಮಚರ್ಯ ದೀಕ್ಷೆ ನೀಡುವ ತಮ್ಮ ನಿರ್ಧಾರವನ್ನು ಮಾರ್ಗರೆಟ್‌ಗೆ ತಿಳಿಸಿದರು.

ಈ ಮೂವರು ಸ್ತ್ರೀಯರನ್ನೂ ತಮ್ಮ ಪುತ್ರಿಯರೆಂದೇ ಪ್ರೀತಿಯಿಂದ ಸ್ವಾಗತಿಸಿದ ಜಗಜ್ಜನನಿ ಶ್ರೀಮಾತೆಗೆ, ಮಾರ್ಗರೆಟ್‌ಳ ಮೇಲೆ ಅದೇನೋ ಅತಿಶಯವಾದ ಪ್ರೇಮಭಾವನೆ. ಆಕೆಗೆ ಇತರರೆಲ್ಲರಿಗಿಂತ ಸ್ವಲ್ಪ ಹೆಚ್ಚಿನ ಸ್ಥಾನವನ್ನೇ ಶ್ರೀಮಾತೆ ನೀಡಿದ್ದರು. ದೇವಿಯಂತೆ ಕಂಗೊಳಿಸುತ್ತಿದ್ದ ಈ ಆಂಗ್ಲ ಕುವರಿ ಅವರ ನೆಚ್ಚಿನ ನರೇಂದ್ರನ ಮಾನಸಪುತ್ರಿಯಾಗಿದ್ದಳಷ್ಟೆ! ನರೇಂದ್ರನ ಕರೆಗೆ ಓಗೊಟ್ಟು, ತನ್ನ ಪ್ರೀತಿಯ ಮಾತೃಭೂಮಿ ಹಾಗೂ ಬಂಧುಮಿತ್ರರನ್ನು ಅಗಲಿ, ಭಾರತೀಯ ನಾರಿಯರ ಉನ್ನತಿಗಾಗಿ ತನ್ನ ಜೀವನವನ್ನೇ ಸಮರ್ಪಿಸಲು ಎಂದೂ ಕಾಣದ ಈ ನಾಡಿಗೆ ಬಂದಿದ್ದಳಷ್ಟೆ !

೧೮೯೮, ಏಪ್ರಿಲ್ ೭ ರ ಮುಂಜಾನೆ ಶ್ರೀಮಾತೆಯವರು ಬೇಲೂರು ಮಠಕ್ಕೆ ಬಂದು, ನೀಲಾಂಬರ ಮುಖರ್ಜಿಯ ತೋಟದ ಮನೆಯಲ್ಲಿ ಉಳಿದುಕೊಂಡರು. ಮಧ್ಯಾಹ್ನ ಬಾಗ್‌ಬಜಾರಿಗೆ ಹೋಗುವ ಮುನ್ನ ಸ್ವಾಮಿ ಬ್ರಹ್ಮಾನಂದರ ವಿನಂತಿಯಂತೆ ಮಠದ ನಿರ್ಮಾಣಕ್ಕಾಗಿ ಹೊಸದಾಗಿ ಕೊಂಡುಕೊಂಡಿದ್ದ ಭೂಮಿಯಲ್ಲಿ ಪದಾರ್ಪಣ ಮಾಡಿದರು. ನೀಲಾಂಬರ ಮುಖರ್ಜಿಯ ತೋಟದ ಮನೆಯಿಂದ ಅವರನ್ನು ದೋಣಿಯಲ್ಲಿ ಕರೆತರಲಾಯಿತು. ಮಠದ ಘಾಟಿಗೆ ದೋಣಿ ಬಂದೊಡನೆ ಶ್ರೀಮಾತೆಯವರನ್ನು ಮಾರ್ಗರೆಟ್, ಶ್ರೀಮತಿ ಓಲೆ ಬುಲ್ ಮತ್ತು ಕುಮಾರಿ ಮ್ಯಾಕ್ಲಿಯಾಡ್ ಸ್ವಾಗತಿಸಿ, ಹೊಸ ಜಾಗವನ್ನು ನೋಡಲು ಅವರನ್ನು ಕರೆದೊಯ್ದರು.

ಅನಾರೋಗ್ಯದಿಂದ ನರಳುತ್ತಿದ್ದ ಸ್ವಾಮೀಜಿ ಆಗ ಡಾರ್ಜಿಲಿಂಗ್‌ನಲ್ಲಿ ವಿಶ್ರಾಂತಿ ಪಡೆದು ಚೇತರಿಸಿಕೊಳ್ಳುತ್ತಿದ್ದರು. ಈಗಾಗಲೇ ಮಾರ್ಗರೆಟ್‌ಳಿಗೆ ದೀಕ್ಷೆಯಾಗಿ, 'ನಿವೇದಿತಾ' ಎಂಬ ಹೆಸರು ನೀಡಲಾಗಿತ್ತು. ನೀಲಾಂಬರ ಮುಖರ್ಜಿಯ ತೋಟದ ಮನೆಯಲ್ಲಿದ್ದ ಹಳೆಯ ಮಠದ ದೇವರಕೋಣೆಯಲ್ಲಿ ಮಾರ್ಚ್ ೨೫ ರಂದು ಸ್ವಾಮೀಜಿ ಆಕೆಗೆ ಬ್ರಹ್ಮಚರ್ಯ ದೀಕ್ಷೆ ನೀಡಿದ್ದರು. ಶ್ರೀಶಾರದಾದೇವಿಯವರು ಅವಳ ಮೇಲೆ ಹರಿಸಿದ್ದ ಸಹಜಪ್ರೇಮ, ಮಾರ್ಗರೆಟ್ ಈ ಮೂಲಕ ಪಡೆದ ಮರುಹುಟ್ಟು – ಇವು ಗುರುದೇವ ರವೀಂದ್ರನಾಥ ಠಾಕೂರರನ್ನು ಬಹಳ ಪ್ರಭಾವಿತಗೊಳಿಸಿದ್ದಿರಬೇಕು. ಅವರ 'ಗೋರಾ' ಕಾದಂಬರಿಯಲ್ಲಿ 'ನಿವೇದಿತೆ' ಮತ್ತು 'ಶ್ರೀಶಾರದಾದೇವಿ', ಇವರಿಬ್ಬರ ಪ್ರತಿಬಿಂಬಗಳು 'ಗೋರಾ' ಹಾಗೂ 'ಆನಂದಮಯಿ' ಎಂಬ ಪಾತ್ರಗಳಲ್ಲಿ ಎದ್ದು ತೋರುತ್ತವೆಂದು ಅನೇಕರು ಅಭಿಪ್ರಾಯಪಡುತ್ತಾರೆ.

ಶ್ರೀಮಾತೆಯವರ ಮೊದಲ ಭೇಟಿಯ ಬಗ್ಗೆ ನಿವೇದಿತಾ ತನ್ನ ಸ್ನೇಹಿತೆ ಶ್ರೀಮತಿ ನೀಲ್ ಹ್ಯಾಮಂಡ್‌ಳಿಗೆ ೧೮೯೮ ಮೇ ೨೨ ರಂದು ಬರೆದ ಕಾಗದದಲ್ಲಿ ಹೀಗೆ ಹೇಳಿಕೊಳ್ಳುತ್ತಾಳೆ: " 'ಶಾರದಾ' ಎಂದು ಪ್ರಸಿದ್ಧರಾಗಿರುವ ಶ್ರೀರಾಮಕೃಷ್ಣರ ಪತ್ನಿಯ ಬಗ್ಗೆ ನಿನಗೆ ತಿಳಿಸಬೇಕೆಂದು ನಾನು ಅನೇಕ ಸಲ ಆಲೋಚಿಸಿದ್ದೆ. ಮೊದಲಿಗೆ ಹೇಳುವುದಾದರೆ, ಐವತ್ತು ವರ್ಷ ವಯಸ್ಸಿನ ಇವರು ಒಬ್ಬ ಹಿಂದೂ ಮಹಿಳೆ ಉಡುವಂತೆ ಒಂದು ಬಿಳಿಯ ಹತ್ತಿಬಟ್ಟೆಯನ್ನು ಉಟ್ಟಿದ್ದರು. ಅವರ ಹಿಂದೆ ನಿಂತು ಪುರುಷ ಭಕ್ತರು ಸಂಭಾಷಣೆ ನಡೆಸುತ್ತಾರೆ. ಆ ಸಮಯದಲ್ಲಿ ಅವರು ತಕ್ಷಣ ಬಿಳಿಯ ಸೆರಗನ್ನು ತಲೆಯ ಮೇಲೆ, ಪೂರ್ತಿ ಮುಖ ಮುಚ್ಚುವಂತೆ, ಎಳೆದುಕೊಳ್ಳುತ್ತಾರೆ. ಅಲ್ಲದೆ ಗಂಡಸರಿಗೆ ನೇರವಾಗಿ ಉತ್ತರ ನೀಡುವುದಿಲ್ಲ. ಇನ್ನೊಬ್ಬ ಹಿರಿಯ ಸ್ತ್ರೀಯೊಡನೆ ಪಿಸುಗುಟ್ಟುತ್ತ ಮಾತನಾಡುತ್ತಾರೆ, ಅಷ್ಟೇ. ಆಕೆ ಆ ಮಾತುಗಳನ್ನು ಆ ವ್ಯಕ್ತಿಗೆ ಜೋರಾಗಿ ಹೇಳುತ್ತಾರೆ. ಈ ರೀತಿ ನಡೆಯುವುದರಿಂದ, ನಮ್ಮ ಗುರುದೇವರು (ಸ್ವಾಮೀಜಿಯವರು) ಶಾರದಾದೇವಿಯವರ ಮುಖವನ್ನೇ ನೋಡಿಲ್ಲ. ಇದರ ಜತೆಗೆ ನೀನು ಇದನ್ನೂ ಊಹಿಸಬೇಕು, ಅವರು ಯಾವಾಗಲೂ ನೆಲದ ಮೇಲೆ ಅಥವಾ ಬಿದಿರಿನ ಚಾಪೆಯ ಮೇಲೆ ಕುಳಿತಿರುತ್ತಾರೆ. ಇದೆಲ್ಲ ನಿನಗೆ ಅಷ್ಟೇನೂ ಗಮನಾರ್ಹವಲ್ಲದಿರಬಹುದೇನೋ, ಆದರೆ ಈ ಮಹಿಳೆಯನ್ನು ಚೆನ್ನಾಗಿ ಅರಿತ ಮೇಲೆ, ಇವರು ಜಾಣತನದ, ವಾಸ್ತವಿಕ ಪ್ರಜ್ಞೆಯ ಪ್ರತಿಮೂರ್ತಿ; ಸ್ವಲ್ಪ ಪರಿಚಯವಿದ್ದವರಿಗೂ ಜೀವದಾಯಿನಿಯಾಗಬಲ್ಲವರು ಎಂದು ಗೊತ್ತಾಗುತ್ತದೆ. ಶ್ರೀರಾಮಕೃಷ್ಣರು ಯಾವ ಕಾರ್ಯವನ್ನು ಪ್ರಾರಂಭಿಸಬೇಕಾದರೂ ಇವರ ಸಲಹೆ ಪಡೆಯುತ್ತಿದ್ದರು. ಶಿಷ್ಯರೆಲ್ಲರೂ ಈಗಲೂ ಇವರ ಸಲಹೆಯಂತೆಯೇ ನಡೆದುಕೊಳ್ಳುವರು. ಇವರು ಮಧುರತೆಯ ಪ್ರತೀಕ – ಎಷ್ಟು ಮೃದು, ಪ್ರೀತಿ ಮತ್ತು ಸಂತೋಷದಿಂದ ಚಿಕ್ಕ ಹುಡುಗಿಯಂತೆ ಇದ್ದಾರೆ!"

ಶ್ರೀಮಾತೆಯವರು ಹೇಗೆ ಹುಡುಗಿಯಂತೆ ಸಂತಸದಿಂದಿರುವರು ಎಂಬುದನ್ನು ನಮಗೆ ತಿಳಿಸಲೋ ಎಂಬಂತೆ ನಿವೇದಿತಾ ಒಂದು ಉಲ್ಲಾಸದ ಸಂದರ್ಭವನ್ನು ದಾಖಲಿಸಿದ್ದಾಳೆ: "ಆ ದಿನ ಸಂನ್ಯಾಸಿಗಳೊಬ್ಬರು ಬಂದು, ಸ್ವಾಮೀಜಿ ನಮ್ಮನ್ನು ನೋಡುವುದು ತಡವಾಗುತ್ತದೆಂದು ಹೇಳಿದರು. ನಾನು ತಮಾಷೆಗೆ, 'ಸ್ವಾಮೀಜಿ ತತ್‌ಕ್ಷಣವೇ ನಮ್ಮಲ್ಲಿಗೆ ಬಂದು ನಮ್ಮನ್ನು ನೋಡಲೇಬೇಕು. ಇಲ್ಲದಿದ್ದರೆ ನಾವು ಮನೆಗೆ ಹಿಂದಿರುಗಿ ಹೋಗುವೆವು' ಎಂದೆ. ನಾನು ನನ್ನ ಪಾದರಕ್ಷೆಗಳ ಬಳಿಗೆ ಹೋದಾಗ ಆ ಸಂನ್ಯಾಸಿಗೆ ಆತಂಕವಾಗಿ, ಅವರು ಸ್ವಾಮೀಜಿಯನ್ನು ಕರೆತರಲು ಓಡಿದರು! ಇದನ್ನು ಕೇಳಿದಾಗ ಶ್ರೀಮಾತೆ ನಕ್ಕದ್ದನ್ನು ನೀನು ನೋಡಬೇಕಾಗಿತ್ತು! ಆಗಷ್ಟೇ ಮೂಡಿಬಂದ ನಿರ್ಮಲ ನಗೆ ಅದು. ಅವರು ನನ್ನನ್ನು 'ನನ್ನ ಮಗಳೇ' (ಬಂಗಾಳಿಯಲ್ಲಿ 'ಖೂಕಿ' ) ಎಂದು ಕರೆಯುತ್ತಾರೆ."

ಮೇಲಿನ ನಿರೂಪಣೆಯಿಂದ ಇದು ಅವರಿಬ್ಬರ ಮೊದಲ ಭೇಟಿಯ ಅನಂತರದ ಘಟನೆ ಎಂದು ತಿಳಿಯುತ್ತದೆ.



ನಿವೇದಿತಾ ಹಾಗೂ ಆಕೆಯ ಗೆಳತಿಯರು ಶ್ರೀಮಾತೆಯವರ ನಡೆನುಡಿಗಳಿಂದ ತುಂಬ ಪ್ರಭಾವಿತರಾಗಿದ್ದರೆಂಬುದು ಖಚಿತ. ತಾನು ಬರೆದ ನೆನಪುಗಳಲ್ಲಿ ನಿವೇದಿತಾ ಶ್ರೀಮಾತೆಯವರ ಬಗ್ಗೆ ಹೀಗೆ ನುಡಿದಿದ್ದಾಳೆ: "ಅವರು ಕಟ್ಟಾ ಸಂಪ್ರದಾಯವಾದಿಯಾಗಿದ್ದರು. ಆದರೆ ಅದೆಲ್ಲ ಅವರು ಭೇಟಿ ಮಾಡಿದ ಪ್ರಪ್ರಥಮ ವಿದೇಶೀಯರಾದ ಶ್ರೀಮತಿ ಬುಲ್ ಮತ್ತು ಕುಮಾರಿ ಮ್ಯಾಕ್ಲಿಯಾಡ್‌ರ ಎದುರು ಕರಗಿಹೋಯಿತು. ಅವರ ಜೊತೆ ಶ್ರೀಮಾತೆ ಊಟಮಾಡಿದರು. ನಾವು ಅವರ ಬಳಿ ಹೋದೊಡನೆಯೇ ನಮಗೆ ಹಣ್ಣುಗಳನ್ನು ನೀಡಲಾಗುತ್ತಿತ್ತು. ಇವುಗಳನ್ನು ನಾವು ಶ್ರೀಮಾತೆಯವರಿಗೆ ಸಮರ್ಪಿಸುತ್ತಿದ್ದೆವು. ಇತರರು ಅಚ್ಚರಿಪಡುವಂತೆ ಅವರು ಅವನ್ನು ಸ್ವೀಕರಿಸುತ್ತಿದ್ದರು. ಇದು ನಮಗೆಲ್ಲಾ ಅವರಲ್ಲಿ ಬಹಳ ಗೌರವಭಾವವನ್ನು ಮೂಡಿಸುತ್ತಿತ್ತು; ಬೇರಾರೂ ನಡೆಸದ ಹಾದಿಯಲ್ಲಿ ನನ್ನ ಮುಂದಿನ ಕಾರ್ಯಗಳನ್ನು ನಡೆಸಲು ಇದರಿಂದ ನನಗೆ ಸಾಧ್ಯವಾಯಿತು."

ತನ್ನ ಬಳಿ ಬಂದ ಎಲ್ಲ ಮಹಿಳೆಯರ ಮೇಲೆ ಶ್ರೀಮಾತೆಯವರು ತಮ್ಮ ಪವಿತ್ರ ಮಾತೃತ್ವದ ಪ್ರಭಾವ ಬೀರುವುದನ್ನು ನೋಡಿ ನಿವೇದಿತೆಗೆ ಆಶ್ಚರ್ಯವಾಗುತ್ತಿತ್ತು. ಆಕೆ ತನ್ನ ಸ್ನೇಹಿತೆ ನೀಲ್‌ಳಿಗೆ ಹೀಗೆ ಬರೆಯುತ್ತಾಳೆ: "ಅವರ ಹಿರಿಮೆಯ ಬಗ್ಗೆ ನಾನು ಕೊಡಬಲ್ಲ ಅತ್ಯುತ್ತಮ ರುಜುವಾತು ಒಂದಿದೆ. ಕೊಲ್ಕತಾದಲ್ಲಿ ಅವರು ಇರುವಾಗ ಸುಮಾರು ೧೪–೧೫ ಕುಲೀನ ಮಹಿಳೆಯರು ಅವರ ಸುತ್ತ ಸದಾ ನೆರೆದಿರುತ್ತಾರೆ. ಇವರೆಲ್ಲ ಸಿಟ್ಟಿನವರು, ಜಗಳಗಂಟರು. ಶ್ರೀಮಾತೆಯವರು ತಮ್ಮ ಅಚ್ಚರಿಯ ಚತುರತೆ ಮತ್ತು ಸುಮನೋಹರ ನಡತೆಗಳಿಂದ ಅವರನ್ನು ಶಾಂತವಾಗಿರಿಸದಿದ್ದರೆ, ಎಲ್ಲರಿಗೂ ಬಗೆಬಗೆಯ



ಸಂಕಷ್ಟಗಳನ್ನು ಒಡ್ಡಬಲ್ಲಂಥವರು ಅವರು. ಈ ಮಹಿಳೆಯರ ವ್ಯಕ್ತಿತ್ವದ ಆಧಾರದ ಮೇಲೆ ನಾನು ಹೀಗೆ ಹೇಳುವುದಲ್ಲ – ಅವರನ್ನು ಸಾಮಾನ್ಯ ದೃಷ್ಟಿಯಿಂದ ಗಮನಿಸಿಯೇ ನಾನು ಹೀಗೆ ತಿಳಿದದ್ದು."

ರಾಮಕೃಷ್ಣ ಸಂಘದ ಸಂನ್ಯಾಸಿಗಳು ಮತ್ತು ಬ್ರಹ್ಮಚಾರಿಗಳು ಶ್ರೀಮಾತೆಯವರನ್ನು ಅತ್ಯಂತ ಗೌರವಾದರಗಳಿಂದ ನೋಡುವ ರೆಂಬುದು ಮೊದಲ ಹಾಗೂ ಅನಂತರದ ಒಂದೆರಡು ಭೇಟಿ ಗಳಲ್ಲಿಯೆ ನಿವೇದಿತೆಗೆ ಮನದಟ್ಟಾಯಿತು. ಮೇಲೆ ಉಲ್ಲೇಖಿಸಿದ ಪತ್ರದಲ್ಲಿಯೆ, ಅತ್ಯಂತ ಭಾವಪೂರ್ಣ ಭಾಷೆಯಲ್ಲಿ ನಿವೇದಿತೆ ಹೀಗೆ ಬರೆದಿದ್ದಾಳೆ: "ಸಂನ್ಯಾಸಿಗಳು ಶ್ರೀಮಾತೆಯವರ ಮೇಲೆ ಇಟ್ಟಿರುವ ವಿನಯವನ್ನು ನೀನು ನೋಡಬೇಕು! ಎಲ್ಲರೂ ಅವರನ್ನು 'ಅಮ್ಮಾ' ಎಂದೇ ಕರೆಯುತ್ತಾರೆ. ಬೇರೆಯವರೆದುರು ಮಾತನಾಡುವಾಗ ಅವರನ್ನು 'ಶ್ರೀಮಾತೆ' ಎಂದೇ ಕರೆಯುತ್ತಾರೆ. ಅವರ ಬಳಿ ಯಾವಾಗಲೂ ಒಬ್ಬಿಬ್ಬರು ಸಂನ್ಯಾಸಿಗಳು ಇದ್ದೇ ಇರುತ್ತಾರೆ; ಶ್ರೀಮಾತೆಯ ಬರಿಯ ಇಚ್ಛೆ, ಇವರಿಗೆ ಆಜ್ಞೆ. ಈ ಮಧುರ ಸಂಬಂಧವನ್ನು ನೋಡುವುದು ಎಷ್ಟು ಚೆನ್ನ! ಸರಳ ಮತ್ತು ಯಾವ ಬಾಹ್ಯ ತೋರಿಕೆಯೂ ಇಲ್ಲದ ಮುಸುಕನ್ನು ತಮ್ಮ ಮೇಲೆ ಹಾಕಿಕೊಂಡಿದ್ದರೂ, ಶ್ರೀಮಾತೆ ನಿಜವಾಗಿಯೂ, ಇಂದು ಪ್ರಪಂಚದಲ್ಲಿಯೇ ಅತ್ಯಂತ ಮಹಿಮಾನ್ವಿತ ಮಹಿಳೆ."

ಮೊದಲಿನಿಂದಲೂ ಶ್ರೀಮಾತೆಯವರನ್ನು, 'ಮಧುರತೆ' ಹಾಗೂ 'ಪ್ರೀತಿ' ಗಳ ಮೂರ್ತಿರೂಪ ಎಂದೇ ನಿವೇದಿತೆ ತಿಳಿದಿದ್ದಳು. ತನ್ನ ಎಷ್ಟೋ ಪತ್ರಗಳಲ್ಲಿ, "ಅವರೆಷ್ಟು ಮೃದು, 'ನನ್ನ ಮಗಳೇ' ಎಂದೇ ಅವರು ನನ್ನನ್ನು ಕರೆಯುತ್ತಾರೆ" ಎಂದು ಆಕೆ ಬರೆಯುತ್ತಾಳೆ.

ಹಿಮಾಲಯ, ಕಾಶ್ಮೀರ ಮತ್ತು ಅಮರನಾಥ ಗುಹೆಗಳ ಪ್ರವಾಸದಿಂದ ನಿವೇದಿತೆ ೧೮೯೮ ರ ನವೆಂಬರ್ ೧ ರಂದು ಕೊಲ್ಕತಾಗೆ ಹಿಂದಿರುಗಿದಳು. ಸ್ವಾಮಿ ವಿವೇಕಾನಂದರು ಆ ಪ್ರವಾಸದಿಂದ ಕೆಲದಿನಗಳ ಹಿಂದೆ ತಾನೆ ಮರಳಿಬಂದು, ಉತ್ತರ ಕೊಲ್ಕತಾದ ಬಲರಾಮ ಭವನದಲ್ಲಿ ತಂಗಿದ್ದರು. ಆಗ ಆಕೆ ಸ್ವಾಮೀಜಿಯ ಕನಸಾದ ಬಾಲಿಕೆಯರ ಶಾಲೆಯನ್ನು ಪ್ರಾರಂಭಿಸುವ ಪ್ರಬಲ ಇಚ್ಛೆಯನ್ನು ಹೊಂದಿದ್ದಳು. ಒಡನೆಯೆ ಶ್ರೀಮಾತೆಯವರೊಂದಿಗೆ ವಾಸಿಸಲು ಅವಕಾಶ ಮಾಡಿಕೊಡಲು ಸ್ವಾಮೀಜಿಗೆ ಕೇಳಿಕೊಂಡಳು. ಆಗ ಬಾಗ್‌ಬಜಾರಿನಲ್ಲಿದ್ದ ಶ್ರೀಮಾತೆಯವರು ನಿವೇದಿತಾಳನ್ನು ಸಂತೋಷದಿಂದ ತಮ್ಮ ಮನೆಗೆ ಬರಮಾಡಿಕೊಂಡರು. ಅತ್ಯಂತ ಹರ್ಷಿತಳಾದ ನಿವೇದಿತಾ ಮರುದಿನವೇ ಶ್ರೀಮಾತೆಯವರ ಜತೆ ಇರಲು ಹೋದಳು. ಆಗಿನ ಸಮಾಜ ಕಟ್ಟಾ ಸಂಪ್ರದಾಯವಾದಿಯಾಗಿತ್ತು. ಅದರಲ್ಲೂ ಮಡಿವಂತರ ತಾಣವೇ ಆಗಿದ್ದ ಬಾಗ್‌ಬಜಾರಿನಲ್ಲಿ, ಬ್ರಾಹ್ಮಣರ ಮನೆಯೊಂದರಲ್ಲಿ, ಬ್ರಾಹ್ಮಣ ವಿಧವೆಯೊಬ್ಬರ ಜೊತೆ ಮ್ಲೇಚ್ಛ ಮಹಿಳೆಯೊಬ್ಬಳು ವಾಸಿಸುವುದು, ಊಹಿಸಲೂ ಆಗದಷ್ಟು ಅಧಾರ್ಮಿಕ ಕಾರ್ಯವಾಗಿತ್ತು. ಇದರ ಬಗೆಗಿನ ತೀಕ್ಷ್ಣ ಪ್ರತಿಕ್ರಿಯೆಗಳು ಬಾಗ್‌ಬಜಾರನ್ನಷ್ಟೇ ಅಲ್ಲ, ದೂರದ ಚಿಕ್ಕ ಹಳ್ಳಿಗಳಲ್ಲಿ ವಾಸಿಸುತ್ತಿದ್ದ ಶ್ರೀಮಾತೆಯವರ ಬಂಧುಬಳಗದವರ ಮೇಲೂ ಪ್ರಭಾವ ಬೀರುವ ಸಾಧ್ಯತೆಗಳಿದ್ದುವು. ಈ ತೀವ್ರ ಸಾಧ್ಯತೆಗಳ ಅರಿವೇ ನಿವೇದಿತೆಗೆ ಇರಲಿಲ್ಲ. ಮುಂದೆ ಆಕೆ, 'ನಾ ಕಂಡಂತೆ ನನ್ನ ಗುರುದೇವ' ಎಂಬ ತನ್ನ ಪುಸ್ತಕದಲ್ಲಿ ಹೀಗೆ ಬರೆಯುತ್ತಾಳೆ: "ಆ ಕಾಲದಲ್ಲಿ ನನ್ನ ದುಡುಕುತನದಿಂದ ನನ್ನ ಮುಗ್ಧ ಆತಿಥೇಯರಿಗೆ ಹಾಗೂ ದೂರದ ಹಳ್ಳಿಗಳಲ್ಲಿದ್ದ ಅವರ ಬಂಧುಗಳಿಗೆ ಎಂಥ ಸಾಮಾಜಿಕ ತೊಡಕುಗಳಾಗಬಹುದಿತ್ತು ಎಂಬುದು ನನಗೆ ತಿಳಿದಿದ್ದರೆ, ನಾನು ಹಾಗೆ ವರ್ತಿಸುತ್ತಲೇ ಇರಲಿಲ್ಲ."

ಶಾಲೆಯನ್ನು ಪ್ರಾರಂಭಿಸಲು ಒಂದು ಪ್ರತ್ಯೇಕವಾದ ವಸತಿ ಗೃಹದ ಆವಶ್ಯಕತೆ ಇತ್ತು. ಬಾಗ್‌ಬಜಾರಿನಲ್ಲಿ ಈ ಕಾರ್ಯಕ್ಕಾಗಿ ಅಗತ್ಯವಾದ ಮನೆಯನ್ನು ಬಾಡಿಗೆಗೆ ಕೊಡುವವರಾರು? ಆದರೆ ಸ್ವಾಮೀಜಿಯವರ ಪ್ರಭಾವದಿಂದ ಮತ್ತು ಶ್ರೀಮಾತೆಯವರ ಆಶೀರ್ವಾದದಿಂದ ಒಂದು ಮನೆ ಹೇಗೋ ಸಿಕ್ಕಿತು. ಆಶ್ಚರ್ಯ ವೆಂದರೆ ೧೬, ಬೋಸ್‌ಪಾರಾ ಬೀದಿಯಲ್ಲಿದ್ದ ಈ ಮನೆ ಸರಿಸುಮಾರಾಗಿ ಶ್ರೀಮಾತೆಯವರಿದ್ದ ಮನೆಯ ಪಕ್ಕದಲ್ಲಿಯೇ ಇತ್ತು. ಶ್ರೀಮಾತೆಯವರೊಡನೆ ಸಂತೋಷವಾಗಿ ಕೆಲವು ದಿನಗಳು ನೆಲೆಸಿದ್ದ ನಿವೇದಿತೆ, ಈಗ ತನ್ನ ಹೊಸ ಮನೆಗೆ ವಾಸ್ತವ್ಯವನ್ನು ಬದಲಾಯಿಸಿದಳು.

ಕಾಳೀಪೂಜೆಯ ಶುಭದಿನದಂದು (೧೮೯೮, ನವೆಂಬರ್ ೧೩) ಮೇಲಿನ ಮನೆಯಲ್ಲಿ ಭಾರತದ ಸ್ತ್ರೀಶಿಕ್ಷಣದಲ್ಲಿಯೇ ಇತಿಹಾಸ ನಿರ್ಮಿಸಿದ ಅಪೂರ್ವ ಘಟನೆ ಜರುಗಿತು. ಅದು ಪೂರ್ವ ಪಶ್ಚಿಮಗಳು, ಭೂತ ವರ್ತಮಾನಗಳು ಸಂಧಿಸುವ ಸ್ಥಳವಾಯಿತು. ಈಗ 'ನಿವೇದಿತಾ ಬಾಲಿಕೆಯರ ಶಾಲೆ'

ಎಂದು ರಾಷ್ಟ್ರಮಟ್ಟದಲ್ಲಿ ಪ್ರಖ್ಯಾತವಾಗಿರುವ ಹುಡುಗಿಯರ ಶಾಲೆಯನ್ನು, ವಿಧ್ಯುಕ್ತವಾಗಿ ಪೂಜೆ ಸಲ್ಲಿಸಿ, ಶ್ರೀಮಾತೆಯವರು ಅಂದು ಉದ್ಘಾಟನೆ ಮಾಡಿದರು. ಭಾರತೀಯ ಪುನರುತ್ಥಾನದ ಹರಿಕಾರರಾದ ಸ್ವಾಮಿ ವಿವೇಕಾನಂದರು ಸ್ವತಃ ಈ ಅಪೂರ್ವ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಿದ್ದರು. ಅವರ ಜೊತೆ ಶ್ರೀರಾಮಕೃಷ್ಣರ ಆಧ್ಯಾತ್ಮಿಕಪುತ್ರರಾದ ಸ್ವಾಮಿ ಬ್ರಹ್ಮಾನಂದಜಿ, ಶ್ರೀರಾಮಕೃಷ್ಣ ಲೀಲಾಪ್ರಸಂಗದ ಕರ್ತೃ ಸ್ವಾಮಿ ಶಾರದಾನಂದಜಿ ಮೊದಲಾದವರೂ ಉಪಸ್ಥಿತರಿದ್ದರು. ಈ ಐತಿಹಾಸಿಕ ಮುಹೂರ್ತದಲ್ಲಿ ಶ್ರೀಮಾತೆಯವರ ಸಂಗಡಿಗರಾದ ಗೋಲಾಪ್ ಮಾ, ಯೋಗಿನ್ ಮಾ ಕೂಡ ಭಾಗಿಯಾಗಿದ್ದರು. ಶಾಲೆಯ ಸ್ಥಾಪನೆಯ ಈ ಪವಿತ್ರ ಕಾರ್ಯಕ್ರಮದ ಕಡೆಯಲ್ಲಿ ಶ್ರೀಮಾತೆ ತಮ್ಮ ಆಶೀರ್ವಚನವನ್ನು ಹೀಗೆ ನೀಡಿದರು: **"ದೇವಿಯ ಆಶೀರ್ವಾದ ಈ ಶಾಲೆಯ ಮೇಲೆ ಸದಾ ಇರಲಿ; ಇಲ್ಲಿ ಸೇರಿರುವ ಹುಡುಗಿ ಯರು ಆದರ್ಶಬಾಲಿಕೆಯರಾಗಿ ತರಬೇತಿ ಹೊಂದಲಿ."** ಭವಿಷ್ಯದ ಹಿಂದೂ ಸುಶಿಕ್ಷಿತ ಮಹಿಳೆಯರಿಗೆ ಇದಕ್ಕಿಂತ ಸೂಕ್ತ ವಾದ ಆಶೀರ್ವಾದವನ್ನು ನಿವೇದಿತೆ ನಿರೀಕ್ಷಿಸಿರಲಿಲ್ಲ.

ಶ್ರೀಮಾತೆಯವರ ಬಗೆಗೆ ಅಪಾರ ಶ್ರದ್ಧೆ ಹೊಂದಿದ್ದಷ್ಟೇ ಅಲ್ಲ, ಅವರು ಸರಸ್ವತಿಯ ಅವತಾರವೆಂದೇ ನಿವೇದಿತಾ ನಂಬಿದ್ದಳು. ಮುಂದೊಮ್ಮೆ ಶ್ರೀಮಾತೆ ಶಾಲೆಗೆ ಭೇಟಿ ನೀಡಿದಾಗ ಅವಳ ಸಂತೋಷ ಉಕ್ಕಿ ಹರಿದಿದ್ದನ್ನು ಅಲ್ಲಿದ್ದವರೆಲ್ಲ ಗಮನಿಸಿದರು. ಅವರಲ್ಲಿ ಒಬ್ಬರು ಹೀಗೆ ಬರೆದಿದ್ದಾರೆ: "ಒಂದು ದಿನ ಶ್ರೀಮಾತೆಯವರು ಶಾಲೆಗೆ ಭೇಟಿ ನೀಡುವರೆಂದು ನಿರ್ಧಾರವಾಯಿತು. ಇದನ್ನು ಕೇಳಿದ ನಿವೇದಿತೆ ಅಕ್ಷರಶಃ ಆನಂದಮೂರ್ತಿಯಾದಳು. ಶಾಲೆಯ ಎಲ್ಲಾ ಕೊಠಡಿಗಳನ್ನು ತೊಳೆದು, ಎಲ್ಲಿಯೂ ಧೂಳು ಇರದಂತೆ ಶುಭ್ರಗೊಳಿಸ ಲಾಯಿತು; ಹೂವುಗಳು ಮತ್ತು ಹೂವಿನ ಮಾಲೆಗಳಿಂದ ಸಿಂಗರಿಸಲಾಯಿತು. ಶ್ರೀಮಾತೆಯವರು ಎಲ್ಲಿ ಕುಳಿತು ವಿದ್ಯಾರ್ಥಿನಿಯರೊಂದಿಗೆ ಮಾತನಾಡಬೇಕು, ಅವರಿಗೆ ಏನೇನು ಕಾಣಿಕೆ ನೀಡಬೇಕು, ಯಾವ ಪದ್ಯಗಳನ್ನು ಕಂಠಪಾಠ ಮಾಡಿ ಅವರ ಸಮ್ಮುಖದಲ್ಲಿ ಹೇಳಬೇಕು, ಸ್ವಾಗತ ಕೋರುವುದು ಹೇಗೆ – ಮುಂತಾಗಿ ಯೋಜನೆ ಹಾಕುವುದಕ್ಕೇ ನಿವೇದಿತೆಯ ಎಲ್ಲ ಕಾಲವೂ ಮೀಸಲಾಯಿತು."

ಶ್ರೀಮಾತೆಯವರು ಬರುವ ದಿನವಂತೂ ತುಂಬು ಆನಂದದಲ್ಲಿ ಮುಳುಗಿಹೋಗಿದ್ದ ನಿವೇದಿತೆ, ಎಲ್ಲಿ ಬಾಹ್ಯಜ್ಞಾನವನ್ನು ಕಳೆದು ಕೊಳ್ಳುವಳೋ ಎಂಬಂತೆ ಕಾಣುತ್ತಿದ್ದಳು. ಯಾವುದೇ ಕಾರಣ ವಿಲ್ಲದೆ ಸಂತಸಪಡುವ ಎಳೆಯ ಮಗುವಿನಂತೆ, ಯಾವಾ ಗಲೂ ಜೋರಾಗಿ ನಗುತ್ತ, ಅಕ್ಷರಶಃ ಅಲ್ಲಿಂದಿಲ್ಲಿಗೆ ಓಡಾಡುತ್ತ, ಶಾಲೆಯ ಎಲ್ಲ ವಸ್ತುಗಳೂ ಸರಿಯಾದ ಜಾಗದಲ್ಲಿ ಇವೆಯೆ ಎಂದು ಪರೀಕ್ಷಿಸುತ್ತ, ಅವುಗಳನ್ನು ಸರಿಪಡಿಸುತ್ತಿದ್ದಳು. ಆಗಾಗ ಆನಂದಾತಿಶಯದಿಂದ ಉಂಟಾದ ಭಾವೋದ್ವೇಗದಿಂದ ಶಾಲೆಯ ಉಪಾಧ್ಯಾಯಿನಿಯರನ್ನು, ವಿದ್ಯಾರ್ಥಿನಿಯರನ್ನು, ಕೊನೆಗೆ ದಾದಿಯರನ್ನೂ ಕೂಡ ಬಿಗಿದಪ್ಪಿ ಪ್ರೇಮವರ್ಷವನ್ನು ಸುರಿಸುತ್ತಿದ್ದಳು.

ಅಧಿಕೃತವಾಗಿ ಶಾಲೆ ಪ್ರಾರಂಭವಾದ ಒಂದೆರಡು ದಿನಗಳ ಅನಂತರ ಶ್ರೀಮತಿ ಬುಲ್ ಮತ್ತು ಕುಮಾರಿ ಮ್ಯಾಕ್ಲಿಯಾಡ್‌ರು ಕೊಲ್ಕತಾಕ್ಕೆ ಬಂದು, ನಿವೇದಿತೆಯೊಡನೆ ಅವಳ ಮನೆಯಲ್ಲಿಯೇ ತಂಗಿದ್ದರು. ನಿವೇದಿತೆಯ ಅಪೇಕ್ಷೆಯಂತೆ ಶ್ರೀಮತಿ ಓಲೆ ಬುಲ್, ಶ್ರೀಮಾತೆಯವರು ತಂಗಿದ್ದ, ೧೦, ಬೋಸ್‌ಪಾರಾ ಬೀದಿಯ ಮನೆಯಲ್ಲಿ ಅವರ ಭಾವಚಿತ್ರವನ್ನು ತೆಗೆಯುವ ವ್ಯವಸ್ಥೆ ಮಾಡಿದಳು. ಪ್ರಪಂಚದಾದ್ಯಂತ ಜನರು ಪೂಜಿಸಿ ಗೌರವ ಸಲ್ಲಿಸುತ್ತಿರುವ ಪ್ರಸಿದ್ಧವಾದ ಈ ಭಾವಚಿತ್ರವನ್ನು ನಿವೇದಿತಾ ವಾಸಿಸಿದ ೧೬, ಬೋಸ್‌ಪಾರಾ ಬೀದಿಯ ಮನೆಯಲ್ಲಿ ತೆಗೆದದ್ದೆಂದು ಈ ಹಿಂದೆ ತಪ್ಪಾಗಿ ತಿಳಿಯಲಾಗಿತ್ತು. ಮೊಟ್ಟಮೊದಲ ಚಿತ್ರ, ಕೆಳಗೆ ದೃಷ್ಟಿಯಿಟ್ಟು ಕುಳಿತ ಭಂಗಿಯದು. ಎರಡನೆಯದು ನಿವೇದಿತೆಯೊಡನೆ ಮುಖಮಾಡಿ ಕುಳಿತಿರುವ ಭಂಗಿ. ಅದಲ್ಲದೆ ಇನ್ನೊಂದು ಚಿತ್ರವನ್ನೂ ಅಂದೇ ತೆಗೆಯ ಲಾಯಿತು. ಅಂದು ಶ್ರೀಮಾತೆ, ಅತ್ಯಂತ ನಾಚಿಕೆಯಿಂದ ಇದ್ದರು. ಅಲ್ಲದೆ ಅವರ ಪ್ರೀತಿಯ ಶಿಷ್ಯ–ಪುತ್ರ ಸ್ವಾಮಿ ಯೋಗಾನಂದರ ತೀವ್ರ ಕಾಯಿಲೆಯಿಂದ ವಿಚಲಿತರಾಗಿದ್ದು, ಫೋಟೋ ತೆಗೆಸಲು ಇಷ್ಟಪಟ್ಟಿರಲಿಲ್ಲ. ಅವರ ಪ್ರೀತಿಯ 'ಖುಕಿ'ಯಾದ ನಿವೇದಿತೆಯ ಪ್ರೀತಿಯ ಆಗ್ರಹದಿಂದ ಮಾತ್ರ ಇದು ಸಾಧ್ಯವಾಯಿತು. ಶ್ರೀಮಾತೆ ಶಾರದಾದೇವಿಯವರ ಮೊಟ್ಟಮೊದಲ ಈ ಎರಡು ಭಾವಚಿತ್ರಗಳಿಗಾಗಿ ವಿಶ್ವಾದ್ಯಂತ ಇರುವ ಶ್ರೀರಾಮಕೃಷ್ಣರ ಭಕ್ತ ವೃಂದವು ನಿವೇದಿತೆಗೆ – ಶ್ರೀಮಾತೆಯವರ ಆ ಮುದ್ದಿನ 'ಖುಕಿ'ಗೆ – ಋಣಿಯಾಗಿದೆ. ಅದಲ್ಲದೆ ಮೂರನೆಯ ಚಿತ್ರಕ್ಕೂ ನಾವು ನಿವೇದಿತೆಗೇ ಕೃತಜ್ಞರಾಗಿರಬೇಕು.

ಈ ಮೂರನೆಯ ಚಿತ್ರವೂ ಅತ್ಯದ್ಭುತವಾದದ್ದೇ ಆಗಿದೆ. ಅಲ್ಲಿ ದೊರಕುವ ಶ್ರೀಮಾತೆಯವರ ದರ್ಶನ ಅದೆಷ್ಟು ಗಂಭೀರ ವಾದುದು! ಆ ಚಿತ್ರದಲ್ಲಿ ಕಾಣುವ ಅವರ ದೃಷ್ಟಿಯಲ್ಲಿ ಆಳವಾದ ಸಮಾಧಾನ ತುಂಬಿಕೊಂಡಿದೆ. ಅದು ಶಾಂತಿ ವಾತ್ಸಲ್ಯಗಳನ್ನು ಹೊರಸೂಸುತ್ತಿದೆ. ಅವರ ದೃಷ್ಟಿ ಅನಂತವಾದ ಚಿದಾಕಾಶವನ್ನು ಲಕ್ಷಿಸುತ್ತಿರುವಂತಿದೆ. ನಿವೇದಿತೆಯ ಕಡೆಗೆ ಅವರ ಕಣ್ಣುಗಳು ತಿರುಗಿದ್ದರೂ ಅವು ಆಕೆಯ ಮೇಲೆಯೇ ಕೇಂದ್ರೀಕೃತವಾಗಿಲ್ಲ. ಈ ಫೋಟೋದ ಸ್ವಾರಸ್ಯವನ್ನು, **'ಅನಂತದೆಡೆಗೆ ದೃಷ್ಟಿ'** ಎಂಬ ಶೀರ್ಷಿಕೆಯಿಂದ ವಿವರಿಸಬಹುದೇನೋ! ಅವರ ಪ್ರೀತಿಯ 'ಖುಕಿ'ಯಾದ ನಿವೇದಿತೆಯ ಮೇಲೆಯೇ ಅವರ ದೃಷ್ಟಿ ನೆಟ್ಟಿದ್ದರೂ, ಆ ನೋಟ ಇಡೀ ಪ್ರಪಂಚವನ್ನು, ಜಾತಿ–ಮತ–ವರ್ಣಗಳಿಗೆ ಗಮನ ಕೊಡದೆ ಅವರ ಮಕ್ಕಳಾದ ಇಡೀ ಮಾನವತೆಯನ್ನೇ ದೃಷ್ಟಿಸುವಂತಿದೆ. ಜಗತ್ತಿನ ಜನ ನಿವೇದಿತೆಯ ಕೃಪೆಯಿಂದ ಈ 'ವಿಶ್ವಮಾತೆ' ಯನ್ನು ಚಿತ್ರದಲ್ಲಾದರೂ ಇಂದು ಕಾಣುವಂತಾಗಿದೆ.

**ನಿವೇದಿತಾ ಶ್ರೀಮಾತೆಯವರ ವರಪುತ್ರಿ! ಶ್ರೀಮಾತೆಯವರ 'ಖುಕಿ'ಯಾದ ಈಕೆ ನಿಜಕ್ಕೂ ಧನ್ಯಳಾದವಳು!**